ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ತಹಸಿಲ್ದಾರ್ ರವರ ಕಾರ್ಯಾಲಯ ನಂಜನಗೂಡು ತಾಲ್ಲೂಕು ನಂಜನಗೂಡು
ಕಛೇರಿ ದೂರವಾಣಿ: 08221-226252, 223108, ಫ್ಯಾಕ್ಸ್ 223108

---

ಎಲ್‌ಎನ್‌ಡಿ/ಸಿಆರ್/63/10-11 ದಿನಾಂಕ19-10-2010

## ಅಧಿಕೃತ ಜ್ಞಾಪನ

ವಿಷಯ: ಸರ್ಕಾರಿ ಹಾಗೂ ಸಾರ್ವಜನಿಕರ ಜಮೀನುಗಳ ಕಂದಾಯ ಭೂಮಿಯನ್ನು ರಕ್ಷಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವ ಬಗ್ಗೆ.

ಉಲ್ಲೇಖ: 1.ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರ ಪತ್ರ ಸಂಖ್ಯೆ/ಎಲ್‌ಎನ್‌ಡಿ (1) ಪತ್ತುವರಿ/ಸಿಆರ್/11/10-11, ದಿನಾಂಕ28-06-2010.

2.ಅಧ್ಯಕ್ಷರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಬೆಂಗಳೂರುರವರ ಅ.ಸ.ಪತ್ರಸಂಖ್ಯೆ ಸಿಟಿಎಫ್18/10-11, ದಿನಾಂಕ-21-06-2010.

****

ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರುರವರು ಉಲ್ಲೇಖ (1)ರ ಪತ್ರದಲ್ಲಿ ಅಧ್ಯಕ್ಷರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ, ಬೆಂಗಳೂರುರವರ ಆದೇಶವನ್ನು ಉಲ್ಲೇಖಿಸಿ ಅದರಂತೆ ಸರ್ಕಾರಿ ಹಾಗೂ ಸಾರ್ವಜನಿಕ ಜಮೀನುಗಳ ಕಂದಾಯ ಭೂಮಿಯನ್ನು ರಕ್ಷಿಸಲು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸಲು ನಿರ್ದೇಶಿಸಿರುತ್ತಾರೆ.

ಆ ಸಂಬಂಧ ತಾಲ್ಲೂಕು ಮಟ್ಟದ ಪ್ರಾಧಿಕಾರಿಗಳು ನಿಯತಕಾಲಿಕವಾಗಿ ಸಭೆ ಸೇರಿ ಆಗಿರುವ ಪ್ರಗತಿ ಬಗ್ಗೆ ಚರ್ಚಿಸಿ ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಅಧ್ಯಕ್ಷರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಬೆಂಗಳೂರುರವರಿಗೆ ಸಭೆ ನಡವಳಿ ಹಾಗೂ ಪ್ರಗತಿ ವರದಿಯನ್ನು ಸಲ್ಲಿಸ ಬೇಕಾಗಿದ್ದು ತಹಸೀಲ್ದಾರ್ ತಾಲ್ಲೂಕು ಮಟ್ಟದ ಪ್ರಾಧಿಕಾರದ ಸಭೆಯನ್ನು ಇಷ್ಟು ಮುಂದೆ ನಿಯತಕಾಲಿಕವಾಗಿ ಸಭೆ ಕರೆದು ಸಭೆ ನಡೆಸಿ ನಿರ್ಣಯ ಹಾಗೂ ಪ್ರಗತಿ ವರದಿಯನ್ನು ನಿಯತಕಾಲಿಕವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರುರವರಿಗೆ ಸಲ್ಲಿಸಲಾಗುವುದು.

ಆದುದರಿಂದ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ಜಮೀನು ಸಂರಕ್ಷಣಾ ಪ್ರಾಧಿಕಾರವನ್ನು ಕೆಳಕಂಡಂತೆ ರಚಿಸಿ ಆದೇಶಿಸಿದೆ.

| ಕ್ರ.ಸಂ. | ಸರ್ಕಾರಿ ಜಮೀನು ಸಂರಕ್ಷಣಾ ಪ್ರಾಧಿಕಾರದ ಅಧಿಕಾರಿಗಳ ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ತಹಸೀಲ್ದಾರ್ ರವರು, ನಂಜನಗೂಡು ತಾಲ್ಲೂಕು ತಾಲ್ಲೂಕು ಕಛೇರಿ ನಂಜನಗೂಡು | ಅಧ್ಯಕ್ಷರು |
| 2 | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ನಂಜನಗೂಡು | ಸದಸ್ಯರು |
| 3 | ಆರಕ್ಷಕ ವೃತ್ತ ನಿರೀಕ್ಷರು, ನಂಜನಗೂಡು ವೃತ್ತ ನಂಜನಗೂಡು | ಸದಸ್ಯರು |
| 4 | ವಲಯ ಅರಣ್ಯಾಧಿಕಾರಿಗಳು, ಅರಣ್ಯ ಇಲಾಖೆ, ನಂಜನಗೂಡು | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ನಂಜನಗೂಡು | ಸದಸ್ಯರು |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು, ನೀರಾವರಿ ಇಲಾಖೆ, ನಂಜನಗೂಡು | ಸದಸ್ಯರು |
| 7 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ ನಂಜನಗೂಡು | ಸದಸ್ಯರು |
| 8 | ತಾಲ್ಲೂಕು ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ ನಂಜನಗೂಡು | ಸದಸ್ಯರು |
| 9 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ನಂಜನಗೂಡು | ಸದಸ್ಯರು |
| 10 | ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ನಂಜನಗೂಡು | ಸದಸ್ಯರು |
| 11 | ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ನಂಜನಗೂಡು | ಸದಸ್ಯರು |
| 12 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಚೆಸ್ಕಾಂ, ನಂಜನಗೂಡು | ಸದಸ್ಯರು |
| 13 | ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ನಂಜನಗೂಡು | ಸದಸ್ಯರು |
| 14 | ಸಹಾಯಕ ಕಾರ್ಯಪಾಲಕ ಅಅಬಿಯಂತರರು, ಪಂಚಾಯತ್ ರಾಜ್ ತಾಂತ್ರಿಕ ಉಪವಿಭಾಗ ನಂಜನಗೂಡು | ಸದಸ್ಯರು |
| 15 | ವಲಯ ಅರಣ್ಯಾಧಿಕಾರಿಗಳು, ಪ್ರಾದೇಶಿಕ ವಲಯ, ನಂಜನಗೂಡು | ಸದಸ್ಯರು |

ತಾಲ್ಲೂಕು ಮಟ್ಟದ ಪ್ರಾಧಿಕಾರ ಈ ಕೆಳಕಂಡ ಅಂಶಗಳ ಕುರಿತು ಕಾರ್ಯನಿರ್ವಹಿಸ ತಕ್ಕದ್ದು.

1. ಸರ್ಕಾರಿ ಜಮೀನು ಒತ್ತುವರಿಯನ್ನು ಪತ್ತೆ ಹಚ್ಚುವುದು.
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು.
3. ಸರ್ಕಾರಿ ಜಮೀನುಗಳ ಒತ್ತುವರಿಯನ್ನು ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್‌ನಿಂದ ತೆರವುಗೊಳಿಸಿದ ತಕ್ಷಣ ಸದರಿ ಪ್ರದೇಶವು ಯಾವ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆಯೋ ಆಯಾ ಇಲಾಖೆಗಳು ಒತ್ತುವರಿ ತೆರವುಗೊಳಿಸಲಾದ ಪ್ರದೇಶದಲ್ಲಿ ಸುತ್ತಾ ಟ್ರೆಂಚ್ ತೆಗೆಸಿ ಅಥವಾ ಮುಳ್ಳು ಬೇಲಿಯಿಂದ ಬೇಲಿ ಹಾಕಿಸಿ ಮರಗಿಡಗಳನ್ನು ಬೆಳೆಸಲು ಕ್ರಮತೆಗೆದುಕೊಳ್ಳುವುದು.
4. ಸರ್ಕಾರಿ ಜಮೀನುಗಳನ್ನು ಯಾವುದೇ ವ್ಯಕ್ತಿಗಳಿಂದ ಒತ್ತುವರಿಯಾಗದಂತೆ ಕ್ರಮವಹಿಸುವುದಲ್ಲದೇ ಒತ್ತುವರಿ ಮಾಡಿಕೊಂಡಿರುವ ವ್ಯಕ್ತಿಗಳ ವಿರುದ್ಧ ಸೆಕ್ಷನ್ 192(ಎ) ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿ ಕ್ರಮ ಕೈಗೊಳ್ಳುವುದು.

ತಹಸೀಲ್ದಾರರು,
ನಂಜನಗೂಡು ತಾಲ್ಲೂಕು.

ಪ್ರತಿಯನ್ನು:

1. ಮಾನ್ಯ ಪ್ರಾದೇಶಿಕ ಆಯುಕ್ತರು, ಮೈಸೂರು ವಿಬಾಗ, ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಉಪವಿಬಾಗಾಧಿಕಾರಿಗಳು, ಮೈಸೂರು ಉಪವಿಭಾಗ, ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಂಬಂಧಪಟ್ಟ ಪ್ರಾಧಿಕಾರದ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ತಹಸೀಲ್ದಾರರು,
ನಂಜನಗೂಡು ತಾಲ್ಲೂಕು.